ದಿನಾಂಕ 05-12-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಹೆಚ್ ಕೆ ಆರ ವಕೀಲರಿಂದಃ-

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತದ ಸಂಬಂದ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ಯಾರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದಾರೆಂದು ನನಗೆ ನೆನಪಿಲ್ಲ. ಮೃತ ಕೆಂಪೇಗೌಡರಿಗೆ 20 ವರ್ಷ ವಯಸ್ಸಿನವರು ಇದ್ದಾಗ ಮದುವೆ ಮಾಡಿದ್ದೆವು. ಅವರ ಪತ್ನಿ ಕೊರೋನಾದಿಂದ ತೀರಿಕೊಂಡರು. ಪತ್ನಿ ತೀರಿಕೊಂಡ ಒಂದು ವರ್ಷಕ್ಕೆ ಆಕೆಯ ಪತಿ ತೀರಿಕೊಂಡರು. ಕೆಂಪೇಗೌಡರ ಮರಣ ಪ್ರಮಾಣ ಪತ್ರ, ಹಾಜರುಪಡಿಸಿಲ್ಲ. ಮೃತ ಕೆಂಪೇಗೌಡರ ಪತ್ನಿ ಹೆಸರು ಉಮಾ. ಉಮಾ ತೀರಿಕೊಂಡಿದ್ದಾರೆಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನನ್ನ ಮಗ ಮತ್ತು ಸೊಸೆಯ ನಡುವೆ 10 ವರ್ಷಗಳಿಂದ ಮನಸ್ತಾಪ ಇದ್ದು ಸೊಸೆ ಮನೆ ಬಿಟ್ಟು ಹೊರಟು ಹೋಗಿದ್ದರು ಅಂದರೆ ಸರಿಯಲ್ಲ.

ಉಮಾ ನನ್ನ ಸೊಸೆ ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮಗ ಮತ್ತು ಸೊಸೆಗೆ ರೇಷನ್ ಕಾರ್ಡ್ ಇರಲಿಲ್ಲ. ನಮ್ಮ ರೇಷನ್ ಕಾರ್ಡ್ ನಲ್ಲಿ ನನ್ನ ಮತ್ತು ನನ್ನ ಪತಿ ಹೆಸರು ಮಾತ್ರ ಇರುವುದು. 1 ಮತ್ತು 2ನೇ ಅರ್ಜಿದಾರರ ಶಾಲಾ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಸೊಸೆ ಉಮಾ ನನ್ನ ಮಗ ಇದ್ದಾಗ ಆತನ ಜೊತೆ ಜಗಳ ಮಾಡಿಕೊಂಡು ಆಕೆ ತವರು ಮನೆ ಸೇರಿಕೊಂಡಿದ್ದಾಳೆಂದರೆ ಸರಿಯಲ್ಲ. ನನ್ನ ಸೊಸೆ ಬದುಕಿದ್ದರೂ ಸಹ ಆಕೆಗೆ ತಿಳುವಳಿಕೆಗೆ ಇಲ್ಲದಂತೆ ಈ ಅರ್ಜಿ ಸಲ್ಲಿಸಿದ್ದೇವೆಂದರೆ ಸರಿಯಲ್ಲ. ಶವ ತನಿಖಾ ವರದಿಯನ್ನು ಉದ್ದೇಶಪೂರ್ವಕವಾಗಿಯೇ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

ಟ್ರಕ್ ನಂ. ಕೆಎ 26 ಎ 9768 ಚಾಲಕನ ತಪ್ಪಿನಿಂದಲೇ ಅಪಘಾತ ಆದದ್ದು ಅಂದರೆ ಸರಿಯಲ್ಲ. ನನ್ನ ಮಗ ಎಷ್ಟು ವಿದ್ಯಾಭ್ಯಾಸ ಮಾಡಿದ್ದ

ಎಂದು ಜ್ಞಾಪಕ ಇಲ್ಲ. ನನಗೆ ಮೂರು ಜನ ಮಕ್ಕಳು. ನನ್ನ ಮಗನ ಶಾಲಾ ದಾಖಲಾತಿ ಹಾಜರುಪಡಿಸಬಹುದಾ ಅಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನ ಶವ ಸಂಸ್ಕಾರಕ್ಕೆ ರೂ. 2 ಲಕ್ಷ 20 ಸಾವಿರ ಖರ್ಚು ಮಾಡಿದ್ದೇವೆಂದು ತೋರಿಸಲು ದಾಖಲೆ ಇಲ್ಲ. ನನ್ನ ಮಗ ಕಾಂಟ್ರಾಕ್ಟರ ಕೆಲಸದಿಂದ ತಿಂಗಳಿಗೆ ರೂ. 1 ಲಕ್ಷ ಸಂಪಾದನೆ ಮಾಡುತ್ತಿದ್ದ. ಈ ಬಗ್ಗೆ ದಾಖಲೆ ಇದೆ, ನೆನಪಿಲ್ಲ. ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಬಲ್ಲೆ. ಮತ್ತೊಬ್ಬ ಮಗನಿಗೆ ಮದುವೆ ಆಗಿದೆ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಅರ್ಜಿ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ, ಏಕೆಂದರೆ ಕಾನೂನು ಬದ್ದ ವಾರಸುದಾರರನ್ನು ಪಾಟಿಯಾಗಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆಧಾರ ಕಾರ್ಡ್ ಗಳನ್ನು ಕೇಸಿಗೋಸ್ಕರ ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.